**●ತುಂಬಾ ಸಮಯದಿಂದ ಬರೆಯಬೇಕು ಎಂದುಕೊಂಡ, ಬರೆಯಲಾಗದ ಕತೆ, ಮುಟ್ಟಲಾಗದ ಅನುಭವ ನಿಮ್ಮ ಭಾವಕೋಶದಲ್ಲಿ ಇನ್ನೂ ಇದೆಯೇ?**

ಅಂಥ ಅನುಭವಗಳು ಹಾಗೂ ಅಪೂರ್ಣ ಕತೆಗಳು ನನ್ನ ನೋಟ್ ಬುಕ್ಕುಗಳಲ್ಲಿ, ಡೈರಿಗಳಲ್ಲಿ ಇವೆ. ನನ್ನ ಯಾವುದೋ ಒಂದು ಕೃತಿಯ ಸುತ್ತ ಹಬ್ಬಿದ ವಿಚಿತ್ರ ಅನುಭವಗಳು ಕಳೆದ ಹತ್ತು ವರ್ಷಗಳಿಂದಲೂ ಕತೆಯಾಗಿ ಬರೆದುಕೊಳ್ಳುತ್ತಲೇ ಇವೆ. ಅದು ಇನ್ನೇನು ಮುಗಿಯಬಹುದೇನೋ! ಸ್ತ್ರೀ ಪಾತ್ರಗಳು, ದಲಿತ ಪಾತ್ರಗಳು ನನ್ನ ಕತೆಯೊಳಗೆ ಸೃಷ್ಟಿಯಾಗಿದ್ದರೂ, ಈ ಎರಡೂ ಲೋಕಗಳ ಬಗ್ಗೆ ನಾನು ಗ್ರಹಿಸಬೇಕಾದ್ದು ಇನ್ನೂ ತುಂಬಾ ಇದೆ ಎನ್ನಿಸುತ್ತದೆ; ಹಾಗೆಯೇ ನಾನು ಮುಟ್ಟಬಯಸುವ, ಇನ್ನೂ ಮುಟ್ಟಲಾಗದಿರುವ ಇನ್ನೂ ಅನೇಕ ಲೋಕಗಳಿವೆ. ಅದರಲ್ಲೂ ಮಾನವ ವರ್ತನೆಗಳ ಸೂಕ್ಷ್ಮಾತಿಸೂಕ್ಷ್ಮ ರೂಪಗಳನ್ನು, ಮಾನವರ ನಡೆನುಡಿಗಳ ಹಿಂದಿರುವ ಅಸಲಿ ಮುಖವನ್ನು, ಮಾನವಚಿತ್ತದ ವೈಪರೀತ್ಯಗಳನ್ನು, ಸುಳ್ಳುಗಳನ್ನು, ಘನತೆಯನ್ನು ಕತೆಯಲ್ಲಿ ಹಿಡಿಯುವ ಕಷ್ಟ ನಿತ್ಯ ನನ್ನ ಅನುಭವಕ್ಕೆ ಬರುತ್ತಲೇ ಇರುತ್ತದೆ.

**●ಕತೆಯೊಂದರ ತಂತ್ರ ಮತ್ತು ನಿರೂಪಣಾ ವಿಧಾನದ ಬಗ್ಗೆ ನಿಮ್ಮ ಯೋಚನೆಗಳೇನು? ಕಥೆಗಾರಿಕೆಯಲ್ಲಿ ಅದೆಷ್ಟು ಮುಖ್ಯ ಮತ್ತು ನೀವು ಅದನ್ನು ಹೇಗೆ ಪರಿಭಾವಿಸುತ್ತೀರಿ?**

ಉತ್ತಮ ಕತೆಯೊಂದರ ತಂತ್ರ ಹಾಗೂ ವಸ್ತುಗಳು ಬೇರ್ಪಡಿಸಲಾಗದಂಥವು ಎಂಬುದನ್ನು ಓದುಗನಾಗಿ, ಸಾಹಿತ್ಯದ ಅಧ್ಯಾಪಕನಾಗಿ ಗ್ರಹಿಸಲೆತ್ನಿಸುತ್ತಲೇ ಇರುತ್ತೇನೆ. ಉದಾಹರಣೆಗೆ, ಲಂಕೇಶರ 'ವೃಕ್ಷದ ವೃತ್ತಿ' ಕತೆಯಲ್ಲಿ ಮಿಲಿಟರಿ ಸ್ಟೋರ್ಸ್‌ನ ಮುಖ್ಯಾಧಿಕಾರಿಯಾಗಿದ್ದು ನಿವೃತ್ತನಾಗಿದ್ದ ಸಾಹಿತಿಯೊಬ್ಬ, ಪಾರ್ವತಿ ಎಂಬಾಕೆ ಒಂದು ತೆಂಗಿನ ಮರದ ಸುತ್ತ ತನ್ನ ಬದುಕನ್ನು ರೂಪಿಸಿಕೊಂಡ ಸೂಕ್ಷ್ಮ ಕತೆಯನ್ನು ಭಾಷಣದ ರೂಪದಲ್ಲಿ ಹೇಳುತ್ತಿದ್ದಾನೆ. ತನ್ನದು ಅರ್ಥಪೂರ್ಣ ಬದುಕು ಎಂದು ಘೋಷಿಸದ ಪಾರ್ವತಿಯ ಬದುಕಿನ ಸಹಜ ಶಿಸ್ತು, ಇಂಥ ನೈತಿಕ ಶಿಸ್ತುಗಳಿಲ್ಲದ ಸಾಹಿತಿಗಳ ಹಾಗೂ ಅವಳ ತಮ್ಮನ ದುರಂತ... ಇವೆಲ್ಲವನ್ನೂ ಹೇಳಲು ಈ ಕತೆಯಲ್ಲಿ ಬಳಸಿರುವ ಶ್ರದ್ಧಾಂಜಲಿ ಭಾಷಣದ ತಂತ್ರ ಅತ್ಯಂತ ಪರಿಣಾಮಕಾರಿಯಾಗಿದೆ. ಇಲ್ಲಿ ತಂತ್ರ ಹಾಗೂ ವಸ್ತುವನ್ನು ಬೇರ್ಪಡಿಸುವುದು ಕಷ್ಟ...

ಇದೆಲ್ಲ ನಾನು ಓದುಗನಾಗಿ ಪಡೆದುಕೊಂಡ ಒಂದು ಬಗೆಯ ತಿಳಿವಳಿಕೆ. ಆದರೆ ನಾನೇ ಬರೆಯುವ ಕತೆಗಳಲ್ಲಿ ನಿರ್ವಹಣೆಯಾಗುವ ಅನುಭವಗಳು ಹಾಗೂ ವಸ್ತುಗಳು ತಂತಾವೇ ಆ ಕತೆಯನ್ನು ಹೇಳಲು ತಕ್ಕ ತಂತ್ರವನ್ನು ಹೊಳೆಯಿಸಿ, ನನಗೆ ಸೂಚಿಸದಿದ್ದರೆ ಕತೆಗಾರನಾಗಿ ನಾನು ನಿಜಕ್ಕೂ ಅಸಹಾಯಕ! ಅಂಥ ಸನ್ನಿವೇಶದಲ್ಲಿ ಆ ಕತೆ ನನ್ನಿಂದ ಹೊರಬೀಳುವುದೇ ಇಲ್ಲ. ಇವೆಲ್ಲ ತಾಪತ್ರಯಗಳೇ ಬೇಡವೆಂದು ಅನೇಕರು ಒಂದು ಕತೆಯೊಳಗಿನ ಎಲ್ಲ ಸಂದರ್ಭಗಳನ್ನೂ, ಎಲ್ಲ ಪಾತ್ರಗಳ ಕತೆಯನ್ನೂ ಹೇಳುವ ಸರ್ವಸಾಕ್ಷೀ ನಿರೂಪಣಾಪ್ರಜ್ಞೆಯನ್ನು ಅಳವಡಿಸಿಕೊಂಡು ಸರಳವಾಗಿ ಕತೆ ಹೇಳಿಬಿಡುತ್ತಾರೆ. ಆದರೆ ಈ ವಿಧಾನದಲ್ಲಿ ಪೂರ್ಣಚಂದ್ರ ತೇಜಸ್ವಿ ಥರದ ಕೆಲವರು ಗೆದ್ದಂತೆ ಎಲ್ಲರೂ ಗೆಲ್ಲುವುದು ಕಷ್ಟ. ಯಾಕೆಂದರೆ, ಆ ಬಗೆಯ ಸರಳತೆಯನ್ನು ಸಾಧಿಸಲು ಸಂಕೀರ್ಣ ಗ್ರಹಿಕೆಗಳ ಕ್ಲಿಷ್ಟ ಪಾಠಗಳನ್ನು ಮೊದಲು ಕಲಿತಿರಬೇಕಾಗುತ್ತದೆ! ಬದುಕಿನ ಬಗೆಗಿನ ಆಳವಾದ ಫಿಲಾಸಫಿಯೊಂದು ಕಥಾ ಬರವಣಿಗೆಯ ಹಿನ್ನೆಲೆಯಲ್ಲಿ ಎಲ್ಲೋ ಕಂಡೂ ಕಾಣದಂತೆ ಇರಬೇಕಾಗುತ್ತದೆ.

✿